



# ಸಕ್ಕರೆ ಮಕ್ಕಳು

ಅಕ್ಕರೆ ಮಕ್ಕಳು ಪಕ್ಕಕೆ ಬಂದರೆ
ಸುರಿವುದು ಸಕ್ಕರೆ ಧಾರೆ
ಪುಟಾಣಿ ಮಕ್ಕಳು ಮುತ್ತನು ಕೊಡಲು
ಹರಿವುದು ಸವಿಜೇನ ಹೊಳೆ!

ನುಣ್ಣನೆ ಕೈಗಳು ಸಣ್ಣನೆ ಬೆರಳು
ತಾಕಿದ ಕೂಡಲೆ ಮೈಯಲಿ ಮಿಂಚು
ಚಿಗುರಿನ ಕೈಗಳು ಮೋರೆಯ ಸವರಲು
ಹೊಗಳಲು ಸೋತಿತು ಮಾತಿನ ಸಂಚು!

ಹಸುಳೆಯು ಬಂದು ಮಡಿಲಲಿ ಕೂರಲು
ಸಡಿಲಿತು ಗಾಂಭೀರ್ಯ
ಗಲ್ಲವ ಹಿಡಿದು ಮೇಲಕ್ಕೆತ್ತಲು
ಹೊಳೆಯಿತು ಅನುಪಮ ಸೌಂದರ್ಯ!

ತೊದಲುವ ಮಾತನು ಆಡಲು ಜೊತೆಗೆ
ಅರಳಿನ ಹರಳು ಸಿಡಿದಂತೆ
ಕಿಲಕಿಲ ನಗೆಯು ಹರಡಲು ಸುತತಲು
ಗಿಲಕಿಯ ಹಿಡಿದು ಆಡಿಸಿದಂತೆ!

ಕೈ ಹಿಡಿದೆಳೆದು ಆಟವನಾಡಲು
ಕಾಲವು ತಾನೇ ನಿಲ್ಲುವುದು
ಮೈ ಕೈ ದಣಿದರು ಸಮಯವು ಸರಿದರು
ಕನಸಿನ ಮನಸು ತಣಿಯುವುದು!